ಕರ್ನಾಟಕ ಸರ್ಕಾರ
# ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
Government of Karnataka
# Karnataka Residential Educational Institutions Society
(An Organisation of Govt. of Karnataka)

ಸಂಖ್ಯೆ: ಕವಶಿಸಸ/ಆಡಳಿತ/ನೇ.ನೇ.-ಹಿಂ.ಶಿ /ಸಿ.ಆರ್-22/2021-22 ದಿನಾಂಕ:18-08-2022

## ತಿಳುವಳಿಕೆ ಪತ್ರ

ವಿಷಯ: ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯ ವಸತಿ ಶಾಲೆಗಳಲ್ಲಿನ ನೇರನೇಮಕಾತಿಯ ಸಂಬಂಧ KPSC ಮೂಲಕ ಆಯ್ಕೆಯಾಗಿರುವ ಹಿಂದಿ ಭಾಷಾ ಶಿಕ್ಷಕ ಅಭ್ಯರ್ಥಿಗಳ ಸ್ಥಳ ನಿಯುಕ್ತಿಗಾಗಿ ಕೌನ್ಸಿಲಿಂಗ್ ಮಾಡುವ ಬಗ್ಗೆ.

ಉಲ್ಲೇಖ:- (1) ಆಯೋಗದ ಅಧಿಸೂಚನೆ ಸಂಖ್ಯೆ:ಆರ್(2)1084/2017.18/ಪಿ.ಎಸ್.ಸಿ, ದಿನಾಂಕ: 23.06.2017
(2) ಅಂತಿಮ ಆಯ್ಕೆಪಟ್ಟಿಯ ಅಧಿಸೂಚನೆ ಸಂಖ್ಯೆ: ಆರ್(2)712/2020-21 ಪಿ.ಎಸ್.ಸಿ,ದಿನಾಂಕ: 09.06.2020.
(3) ಆಯೋಗದ ಪತ್ರ ಸಂಖ್ಯೆ:ಆರ್(2)911/2020-21 ಪಿ.ಎಸ್.ಸಿ, ದಿನಾಂಕ: 18.06.2020.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ವಸತಿ ಶಾಲೆಗಳಲ್ಲಿ ಖಾಲಿ ಇರುವ ಗ್ರೂಪ್ 'ಸಿ' ವೃಂದದ **ಹಿಂದಿ ಭಾಷಾ ಶಿಕ್ಷಕರನ್ನು** ಕರ್ನಾಟಕ ಲೋಕ ಸೇವಾ ಆಯೋಗದ ಮುಖಾಂತರ ನೇರ ನೇಮಕಾತಿ ಹೊಂದಿರುವ ಅರ್ಹ ಅಭ್ಯರ್ಥಿಗಳ ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಆಯ್ಕೆಯಾಗಿರುವ ಅಭ್ಯರ್ಥಿಗಳ ಪೋಲೀಸ್ ಪರಿಶೀಲನಾ ವರದಿ, ವೈದ್ಯಕೀಯ ಪ್ರಮಾಣ ಪತ್ರ, ಮೀಸಲಾತಿ ಪ್ರಮಾಣ ಪತ್ರಗಳನ್ನು ಸಂಬಂಧಪಟ್ಟದ ಪಾಧಿಕಾರಗಳಿಂದ ಹಾಗೂ ವಿಶ್ವ ವಿದ್ಯಾಲಯಗಳಿಂದ ಅಂಕಪಟ್ಟಿಗಳ ನೈಜತೆ ಪ್ರಮಾಣ ಪತ್ರಗಳನ್ನು ಪಡೆಯಲು ಕ್ರಮವಹಿಸಲಾಗಿರುತ್ತದೆ.

**ಹಿಂದಿ ಭಾಷಾ ಶಿಕ್ಷಕ** ಅಭ್ಯರ್ಥಿಗಳಿಗೆ ದಿನಾಂಕ:02-09-2022 ರಂದು **ಡಾ||.ಬಿ.ಆರ್.ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ವಸಂತನಗರ, ಬೆಂಗಳೂರು-560052** ಇಲ್ಲಿ **ಕೌನ್ಸಿಲಿಂಗ್** ಕಾರ್ಯವನ್ನು ಹಮ್ಮಿಕೊಂಡಿದ್ದು, ಮೂಲದಾಖಲೆಗಳನ್ನು ಸಲ್ಲಿಸಿರುವ ಎಲ್ಲಾ ಅಭ್ಯರ್ಥಿಗಳು ಕೌನ್ಸಿಲಿಂಗ್‌ನಲ್ಲಿ ಹಾಜರಾಗಿ ವಸತಿ ಶಾಲೆಗಳಿಗೆ ಸ್ಥಳ ನಿಯುಕ್ತಿಗೊಳ್ಳಲು ಆಯ್ಕೆ ಮಾಡಿಕೊಳ್ಳತಕ್ಕದ್ದು, ನಂತರ ಪೋಲೀಸ್, ವೈದ್ಯಕೀಯ ವರದಿ, ಸಿಂಧುತ್ವ, ಹೈದ್ರಾಬಾದ್ ಕರ್ನಾಟಕ, ಯೋಜನಾ ನಿರಾಶ್ರಿತ ನೈಜತೆ ಮತ್ತು ವಿದ್ಯಾರ್ಹತೆಯ ನೈಜತೆ ಪ್ರಮಾಣ ಪತ್ರಗಳನ್ನು ಪೂರ್ಣ ಪ್ರಮಾಣದಲ್ಲಿ ಸಲ್ಲಿಸಿರುವ ಅಭ್ಯರ್ಥಿಗಳಿಗೆ ಮಾತ್ರ ನೇಮಕಾತಿ ಆದೇಶವನ್ನು ಸಿದ್ದಪಡಿಸಿ ಸಂಘದ ವೆಬ್‌ಸೈಟ್‌ನಲ್ಲಿ ಪಟ್ಟಿಯನ್ನು ಪ್ರಕಟಿಸಲಾಗುವುದು. ನಂತರ ನೇಮಕಾತಿ ಆದೇಶಗಳನ್ನು ಅಭ್ಯರ್ಥಿಗಳು ಆಯ್ಕೆ ಮಾಡಿಕೊಂಡಿರುವ ವಸತಿ ಶಾಲೆಗಳಿಗೆ ಇ-ಮೇಲ್ ಮುಖಾಂತರ ಕಳುಹಿಸಲಾಗುವುದು. ಅಭ್ಯರ್ಥಿಗಳು ನೇಮಕಾತಿ ಆದೇಶ ಹೊರಡಿಸಿದ 15 ದಿನಗಳೊಳಗಾಗಿ ನೇರವಾಗಿ ವಸತಿ ಶಾಲೆಯಲ್ಲಿಯೇ ವರದಿ ಮಾಡಿಕೊಳ್ಳತಕ್ಕದ್ದು.

ನಂ.8, ಎಂ.ಎಸ್.ಬಿ.-1,6 ಮತ್ತು 7ನೇ ಮಹಡಿ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು - 560052. ದೂರವಾಣಿ : 080-22283366, 22265755, 22204466, 22207722 ಟೆಲಿಫ್ಯಾಕ್ಸ್ : 080-22262288
#8, M.S.B-1, 6th & 7th Floor, Cunningham Road, Bengaluru - 560052. Phone: 080-22283366, 22265755, 22204466, 22207722. Telefax: 080-22262288
Email : ed.kreis@ka.gov.in, Website: www.kreis.kar.nic.in

ಎಲ್ಲಾ ಅಭ್ಯರ್ಥಿಗಳು ಈ ಪತ್ರದೊಂದಿಗೆ ಲಗತ್ತಿಸಿರುವ ಮಾದರಿಯಲ್ಲಿ ಅಫಿಡವಿಟ್‌ನ್ನು ರೂ.100/- ಛಾಪ ಕಾಗದದಲ್ಲಿ ನೋಟರಿ ಮಾಡಿಸಿ ಕಡ್ಡಾಯವಾಗಿ ಕೌನ್ಸಿಲಿಂಗ್ ಸಮಯದಲ್ಲಿ ಹಾಜರುಪಡಿಸತಕ್ಕದ್ದು, ಒಂದು ವೇಳೆ ಅಫಿಡವಿಟ್ ಸಲ್ಲಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಲು ಅವಕಾಶ ನೀಡುವುದಿಲ್ಲ.

ಮುಂದುವರೆದು, ಒಂದು ವೇಳೆ ಕೌನ್ಸಿಲಿಂಗ್‌ಗೆ ಹಾಜರಾಗದಿದ್ದಲ್ಲಿ ಅಂತಹ ಅಭ್ಯರ್ಥಿಗಳನ್ನು ಗೈರುಹಾಜರೆಂದು ಪರಿಗಣಿಸಲಾಗುವುದು. ಹಾಜರಾಗುವ ಅಭ್ಯರ್ಥಿಗಳು ಕಡ್ಡಾಯವಾಗಿ ನಿಗಧಿಪಡಿಸಿದ ಸಮಯಕ್ಕೆ ಸರಿಯಾಗಿ ಹಾಜರಾಗಬೇಕು. ನಂತರ ಬಂದಲ್ಲಿ ಅವಕಾಶವಿರುವುದಿಲ್ಲ. ಅಲ್ಲದೇ ಅಭ್ಯರ್ಥಿಗಳ ಪೋಷಕರು/ಸಂಬಂಧಿಗಳಿಗೆ ಪ್ರವೇಶವಿರುವುದಿಲ್ಲ. ಅಭ್ಯರ್ಥಿಗಳು ಮಾಸ್ಕ್ ಧರಿಸುವುದು ಮತ್ತು ಸಾಮಾಜಿಕ ಅಂತರ ಕಾಯ್ದುಕೊಂಡು ಸಹಕರಿಸಲು ತಿಳಿಸಿದೆ.

| ಕ್ರ ಸಂ | ವಿಷಯ | ಕ್ರಮ ಸಂಖ್ಯೆ | ದಿನಾಂಕ | ಸಮಯ |
|---|---|---|---|---|
| 1 | **ಹಿಂದಿ ಭಾಷಾ ಶಿಕ್ಷಕ** ಶಿಕ್ಷಕರು | ರ್‍ಯಾಂಕ್ 1 ರಿಂದ 65 ರ ವರೆಗೆ | ದಿ:03-09-2022 | 10.00 ರಿಂದ 2.00 |
| | | ರ್‍ಯಾಂಕ್ 66 ರಿಂದ 158 ಹಾಗೂ ರ್‍ಯಾಂಕ್ 1HK ರಿಂದ 23 HK ರ ವರೆಗೆ | | 2.30 ರಿಂದ 5.30 |

ಕಾರ್ಯನಿರ್ವಾಹಕ ನಿರ್ದೇಶಕರು

ಶ್ರೀ/ಶ್ರೀಮತಿ/ಕುಮಾರ/ಕುಮಾರಿ --------------------------- ಆದ ನಾನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯ ವಸತಿ ಶಾಲೆಗಳಲ್ಲಿನ "ಸಿ" ವೃಂದದ ಹುದ್ದೆಗಳ ನೇರ ನೇಮಕಾತಿಯ ಸಂಬಂಧ ಕರ್ನಾಟಕ ಲೋಕಸೇವಾ ಆಯೋಗದ ಅಧಿಸೂಚನೆ ಸಂಖ್ಯೆ:ಆರ್(2)1084/2017-18/ ಪಿ.ಎಸ್.ಸಿ, ದಿನಾಂಕ:23.06.2017 ರಂತೆ ಹಿಂದಿ ಶಿಕ್ಷಕರಾಗಿ ಅಂತಿಮ ಆಯ್ಕೆಪಟ್ಟಿಯಲ್ಲಿ ಕ್ರ ಸಂ ---- ರ ನೊಂದಣಿ ಸಂಖ್ಯೆ ------ ರಂತೆ ಆಯ್ಕೆಯಾಗಿದ್ದು, ದಿನಾಂಕ --- ರಂದು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ ನಡೆದ ಮೂಲ ದಾಖಲೆಗಳ ಪರಿಶೀಲನೆಗೆ ಹಾಜರಾಗಿ ಎಲ್ಲಾ ಮೂಲ ದಾಖಲೆಗಳನ್ನು ಒದಗಿಸಿರುತ್ತೇನೆ.

ದಿನಾಂಕ:02-09-2022 ರಂದು ಕೌನ್ಸಿಲಿಂಗ್‌ಗೆ ಹಾಜರಾಗಿರುವ ನಾನು ಈ ಕೆಳಕಂಡ ನಿಬಂಧನೆಗಳಿಗೆ ಒಳಗೊಂಡಂತೆ ಈ Affidavit ನ್ನು ಸಲ್ಲಿಸುತ್ತಿದ್ದೇನೆ.

1. ನೇಮಕಾತಿ ಆದೇಶದ ಪ್ರತಿಯನ್ನು ಪಡೆದ ನಂತರ ಸ್ಥಳ ನಿಯುಕ್ತಿಗೊಳಿಸಿದ ವಸತಿ ಶಾಲೆಯಲ್ಲಿ 15 ದಿನಗಳೊಳಗಾಗಿ ಸಂಬಂಧಿಸಿದ ಶಾಲೆಯ ಪ್ರಾಂಶುಪಾಲರ ಕಛೇರಿಯಲ್ಲಿ ಕರ್ತವ್ಯಕ್ಕೆ ಹಾಜರಾಗುತ್ತೇನೆ. ಇಲ್ಲವಾದಲ್ಲಿ ಈ ಆದೇಶವನ್ನು ರದ್ದುಗೊಳಿಸಬಹುದಾಗಿರುತ್ತದೆ.
2. ನನ್ನ ನೇಮಕಾತಿ ಆದೇಶಕ್ಕೆ ಸಂಬಂಧಿಸಿದಂತೆ ಭವಿಷ್ಯದಲ್ಲಿ ಉದ್ಭವಿಸಬಹುದಾದ ಮಾನ್ಯ ಉಚ್ಛ ನ್ಯಾಯಾಲಯಗಳ ತೀರ್ಪುಗಳು ಹಾಗೂ ಸರ್ಕಾರದ ತೀರ್ಮಾನಗಳಿಗೆ ಒಳಪಟ್ಟಿರುತ್ತೇನೆ.
3. ನೇಮಕಾತಿ ಆದೇಶವನ್ನು ಪಡೆಯಲು ನಾನು ಒದಗಿಸಿರುವ ಮಾಹಿತಿಗಳು ಸತ್ಯವೆಂದು ಹಾಗೂ ಕರ್ನಾಟಕ ಲೋಕಸೇವಾ ಆಯೋಗದಿಂದ ಹೊರಡಿಸಲಾಗಿರುವ ಅಂತಿಮ ಆಯ್ಕೆಪಟ್ಟಿಯಲ್ಲಿನ ಜೇಷ್ಟತೆಗೆ ಬದ್ಧನಾಗಿರುತ್ತೇನೆ ಎಂದು, ಒಂದು ವೇಳೆ ಒದಗಿಸಿದ ಮಾಹಿತಿ/ದಾಖಲೆಗಳು ಭವಿಷ್ಯದಲ್ಲಿ ಕೃತ್ರಿಮ ಅಥವಾ ತಪ್ಪು ಎಂದು ಕಂಡುಬಂದಲ್ಲಿ ನನ್ನ ನೇಮಕಾತಿಯನ್ನು ರದ್ದುಪಡಿಸಲು ಒಪ್ಪಿರುತ್ತೇನೆ.
4. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಎಲ್ಲಾ ನಿಯಮಗಳು, ಕೆ.ಸಿ.ಎಸ್ ನಿಯಮಗಳು ಹಾಗೂ ಮಾರ್ಗ ಸೂಚಿಗಳಿಗೆ ಬದ್ಧನಾಗಿರುತ್ತೇನೆ.
5. ಕರ್ತವ್ಯಕ್ಕೆ ಹಾಜರಾಗಲು ಯಾವುದೇ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗಳನ್ನು ಅಪೇಕ್ಷಿಸುವುದಿಲ್ಲ.
6. ಮುಂದಿನ ದಿನಗಳಲ್ಲಿ ಜಾತಿ ಸಿಂಧುತ್ವ ಪ್ರಮಾಣ ಪತ್ರ ಅವಶ್ಯವಿದ್ದಲ್ಲಿ ಸಂಘದ ಕೇಂದ್ರ ಕಛೇರಿಯಿಂದ ಸೂಚನೆ ನೀಡಿದ ಸಂದರ್ಭದಲ್ಲಿ ಜಾತಿ ಸಿಂಧುತ್ವ ಪ್ರಮಾಣ ಪತ್ರವನ್ನು ಮಾಡಿಸಿಕೊಡುತ್ತೇನೆ. ಒಂದು ವೇಳೆ ಸಿಂಧುತ್ವ ಪ್ರಮಾಣ ಪತ್ರದಲ್ಲಿ ಆಯ್ಕೆಯಾದ ಜಾತಿ/ ಪ್ರವರ್ಗದಲ್ಲಿ ವ್ಯತ್ಯಾಸ ಕಂಡು ಬಂದಲ್ಲಿ ಅದಕ್ಕೆ ನಾನೇ ಜವಾಬ್ದಾರರಾಗಿದ್ದು, ಅಂತಹ ಸಂದರ್ಭದಲ್ಲಿ ಸಂಘವು ನನ್ನ ನೇಮಕಾತಿ ಆದೇಶವನ್ನು ರದ್ದುಪಡಿಸಲು ಒಪ್ಪಿರುತ್ತೇನೆ ಎಂದು ದೃಢೀಕರಿಸಿರುತ್ತೇನೆ.

ಮೇಲ್ಕಂಡ ಎಲ್ಲಾ ನಿಬಂಧನೆಗಳನ್ನು ಒಪ್ಪಿ ಪ್ರಮಾಣಿಕರಿಸಿ ಈ ಕೆಳಗೆ ಸಹಿ ಮಾಡಿರುತ್ತೇನೆ.

ದಿನಾಂಕ:

ಅಭ್ಯರ್ಥಿಯ ಸಹಿ

ಸ್ಥಳ :